ರಾಜೇಶ್ವರಿ ಮಯ್ಯ, ಪುತ್ತೂರು
ಹುಡುಗಿಯರನ್ನು ಇಂಪ್ರೆಸ್ ಮಾಡಲು ರೋಸೇ ಯಾಕೆ?



ಕೊಟ್ಟಾಗ ಅವಳ ಗಲ್ಲದ ಕೆಂಪಿಗೆ/ ಕಣ್ಣಿನ ಕೆಂಪಿಗೆ ಮ್ಯಾಚ್ ಆಗುವುದು ಅದೊಂದೇ.

ಎಂ.ಸಿ. ಧನ್ಯತಾ, ಬೆಂಗಳೂರು
ಕಾಲಚಕ್ರ ತಿರುಗುವುದಕ್ಕೂ, ಕಾಲಿನಿಂದ ತಿರುಗುವುದಕ್ಕೂ ಏನು ವ್ಯತ್ಯಾಸ?
ಅದರಿಂದ ಆಗಾಗ್ಗೆ ಋತು ಚೇಂಜ್; ಇದರಿಂದ ಆಗಾಗ್ಗೆ ಚಪ್ಪಲಿ ಚೇಂಜ್.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ಬೆಂಗಳೂರ ರಸ್ತೆಗಳಿಗೆ ಟಾರು ಹಾಕುವುದು ಅಭಿವೃದ್ಧಿ ಯೋಜನೆಯೋ, ಋತುಮಾನದ ಚಿತ್ರಕಲಾ ಸ್ಪರ್ಧೆಯೋ?
ಅಧಿಕಾರಿ, ಕಂಟ್ರಾಕ್ಟರುಗಳ ಅಭಿವೃದ್ಧಿ ಯೋಜನೆ; ಜನರ ಚಿತ್ರಹಿಂಸಾ ಕಲಾ ಸ್ಪರ್ಧೆ.

ಆರ್. ಮಧುಸೂದನ್, ಹಾಸನ
ಪಿಂಡ ಇಡದೆ ಕಾಗೆ ಬಂದರೆ ಏನರ್ಥ?



ಇವರದಕ್ಕೇ ಅಡ್ವಾನ್ಸ್ ಬುಕಿಂಗಿಗೆ ಬಂದಿದೆಯೆಂದು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ನೀರಿನ ಆಳ ನೋಡಿ ನೀರಿಗಿಳಿಯಬೇಕು. ಹೆಣ್ಣಿನ...?
ಹೆಣ್ಣಿನ ತಾಳ ನೋಡಿ ತಕ್ಕಂತೆ ಕುಣಿಯಬೇಕು.

ದಿನೇಶ್, ಗುಡ್ಡದೂರು
ನಿಮಗೆ ಸ್ವರ್ಗದಲ್ಲಿರುವವರು ಹೆಚ್ಚು ಪ್ರಶ್ನೆ ಕೇಳುತ್ತಾರೋ, ನರಕದಲ್ಲಿರುವವರೋ?
ಆ ಎರಡೂ ಕಡೆ ಪೋಸ್ಟ್ ಕಾರ್ಡ್ ಸಿಗದಾದ್ದರಿಂದ ಭುವಿಯಲ್ಲಿದ್ದೇ ಕೇಳುತ್ತಾರೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಚಳಿಗಾಲದಲ್ಲಿ ಬರುವಷ್ಟೇ ಚೆನ್ನಾಗಿ ಬೇಸಿಗೆಯಲ್ಲೂ ನಿದ್ರೆ ಬಂದಿದ್ದರೆ ಚೆನ್ನಿತ್ತಲ್ಲವೆ?
ಒಂದು ಮರ ಬೆಳೆಸಿ, ಕೆಳಗೆ ಚಾಪೆ ಹಾಸಿ ಮಲಗಿದರೆ, ಬೇಸಿಗೆಯಲ್ಲೂ ಸುನಿದ್ರೆ ನಿಶ್ಚಿತ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಐಟಿ–ಬಿಟಿ ಯುಗದಲ್ಲಿಯೂ ಲಿಂಗತಾರತಮ್ಯವೆ?
ಯುಗ ಯಾವುದಾದರೇನು, ಮಾನವಮೃಗ ಅದೇ ಅಲ್ಲವೆ!

ಫಾಲನೇತ್ರ ಸಜ್ಜನ, ಶಿರಸಿ
ಏನೇನೋ ದೌರ್ಬಲ್ಯಗಳಿರುವ ದೇವತೆಗಳ ಹೆಚ್ಚುಗಾರಿಕೆಯಾದರೂ ಏನು?
ನಾವೇನು ಅರ್ಪಿಸುತ್ತೇವೋ ಅದೇ. ಆ ದೌರ್ಬಲ್ಯಗಳನ್ನೂ ಅವರಿಗೆ ಆರೋಪಿಸಿದ್ದು ನಾವೇ.

ಜಯಶ್ರೀ, ಬೆಂಗಳೂರು
ಇತ್ತೀಚೆಗೆ ಅಪಹಾಸ್ಯವೇ ಹಾಸ್ಯವಾಗುತ್ತಿದೆಯಲ್ಲ, ಕಾರಣ?
ಅದನ್ನು ತಿರಸ್ಕರಿಸದ ವಾಹಿನಿಗಳು, ಸಂಘಟಕರು, ಶ್ರೋತೃಗಳು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಅನುಮಾನ ಸುಳ್ಳಾಗಬಹುದು. ಅನುಭವ?
ಜಾದೂಗಾರನ ಮುಂದೆ ಪಡೆದ ಅನುಭವ ಪೊಳ್ಳಾಗುತ್ತದಲ್ಲ!

ಮೃತ್ಯುಂಜಯ ಎ, ಪಾಂಡವಪುರ
ಪ್ರಾಣಿಪಕ್ಷಿಗಳಿಗೆ ಆಸೆ ಏಕಿಲ್ಲ?
ಆಸೆ ಪಟ್ಟರೆ ಇತರ ಪ್ರಾಣಿಗಳು 'ಥೂ ಮನುಷ್ಯ!' ಎಂದು ಬಯ್ಯುತ್ತವಂತಲ್ಲ.

ರಮೇಶ್ ಜಿ. ಬೊಂಗಾಳೆ, ಬೈಲಹೊಂಗಲ
ಅಂದು ಗುರುಗಳಿಗೆ ಬ್ರಹ್ಮ, ವಿಷ್ಣು, ಮಹೇಶ್ವರ ಎಂದರು. ಇಂದು?
ಗೂಗಲ್, ಇನ್‌ಸ್ಟಾ, ಟ್ವಿಟರೇಶ್ವರ.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕಾರಣಿಗಳದು ಪ್ರೇಮ ಭಾಷಣವೆ?
ವಿಪಕ್ಷದ ಪ್ರಕಾರ 'ಪ್ರೇತ ಭಾಷಣ', ಜನರ ಪ್ರಕಾರ 'ಸ್ವಪ್ರೇಮ ಭಾಷಣ'.

## ಬಹುಮಾನಿತ ಪ್ರಶ್ನೆ

ಕಾಳೀಹುಂಡಿ ಶಿವಕುಮಾರ್, ಮೈಸೂರು
ಹಾಕಿಕೊಂಡ ಸಂಕಲ್ಪಗಳು ನೆರವೇರಿಲ್ಲ. ಮತ್ತೊಂದು ಹೊಸ ವರ್ಷ ಬಂದಿತಲ್ಲ?
'ಸಂಕಲ್ಪಗಳನ್ನು ಹಾಕಿಕೊಳ್ಳುವುದಿಲ್ಲ' ಎಂದು ಸಂಕಲ್ಪ ಮಾಡಿ; ಖಂಡಿತ ನೆರವೇರುತ್ತದೆ.

ಭಾರತೀ ಗಂಗಾಧರ್, ಬೆಂಗಳೂರು
ಸಾಕಿದ ನಾಯಿಗಳಿಗಿಂತ ಬೀದಿನಾಯಿಗಳು ದಷ್ಟಪುಷ್ಟವಾಗಿರಲು ಕಾರಣವೇನು?
ಡಯಟ್ ಮಾಡದೆ ತಿಂದು, ತಿಂದದ್ದು ಅರಗುವಷ್ಟು ವಾಕ್ ಮಾಡುವುದರಿಂದ.

ಬಿ. ಬಸವರಾಜ, ಹರಿಹರ
ಸ್ವರ್ಗಸುಖ ಹೇಗಿರುತ್ತೆ?
'ನಂತರ ನರಕವನ್ನೂ ಎದುರಿಸಲು ಸಿದ್ಧ' ಎಂಬ ಹುಚ್ಚನ್ನು ಹುಟ್ಟಿಸುವಂತೆ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಪ್ರೀ ವೆಡ್ಡಿಂಗ್ ಶೂಟ್ ಮಾಡಿಸುವ ರಹಸ್ಯವೇನು?



ಅದು 'ಮುಂದಿನ ದಿನಗಳಲ್ಲಿ ಸುಖವಿದೆ' ಎಂದು ವಧುವರರು ಪರಸ್ಪರರಿಗೆ ತೋರುವ ಜಾಹೀರಾತು.

ಬಿದರಹಳ್ಳಿ ವಿಜಯ, ಹಿರೇಹಡಗಲಿ
ನಮ್ಮ ತಟ್ಟೆಯಲ್ಲಿ ಮೃಷ್ಟಾನ್ನವಿದ್ದರೂ ಪಕ್ಕದವನ ತಂಗಳನ್ನಕ್ಕೆ ಕೈ ಹಾಕುವುದು ಎಷ್ಟು ಸರಿ?
ಅಸಿಡಿಟಿ ಆಗಿದ್ದು, ಬಿಸಿ ತಿನ್ನಕೂಡದೆಂಬ ಪಥ್ಯವಿದ್ದರೆ ಅದೇ ಸರಿ.

ಜಗದೀಶ ಬಿ. ಹೊಸೂರು, ಮೈಸೂರು
ಹರಿದ ಜೀನ್ಸ್ ಪ್ಯಾಂಟ್ ಧರಿಸುವವರ ಸಂಖ್ಯೆ ಇತ್ತೀಚೆಗೆ ಹೆಚ್ಚಾಗಲು ಕಾರಣವೇನು?
'ಹರಿ' ಭಕ್ತಿ ಅವರಿಗೆ ಜೀನ್ಸಲ್ಲೇ ಬಂದಿದೆಯಂತೆ.

■ ರಾಮ್